ಹೊರಟಳು. ಹೊರಡುವ ಮುಂಚೆ ರತ್ನಮ್ಮ, 'ಮನಿ ಬಾಕ್ಲು ಹಾಕ್ಕೊಂಡು ಮನಿಕ್ಕಳಾಕೆ ಇಲ್ಲೆ ಬಂದ್ಬಿಡು. ಅಲ್ಲಿ ಎಂಗೆ ಮನಿಗ್ತಿ' ಎಂದು ನುಡಿದಳು. ಶಾರದಮ್ಮ 'ನೋಡುನ ರತ್ನಾ...' ಎನ್ನುತ್ತಾ ಹೊರಗಡಿಯಿಟ್ಟಳು. ಮಳೆ ಸಂಪೂರ್ಣ ನಿಂತಿತ್ತು. ಆಗಸದಲ್ಲಿ ಚುಕ್ಕಿಗಳ ಮಿನುಗು ರಾತ್ರಿಯ ನಗುವಿನಂತೆ ಹೊಳೆಯುತ್ತಲಿತ್ತು. ಶಾರದಮ್ಮ ತನ್ನ ಮನೆಯ ಬಾಗಿಲ ಬಳಿ ಬರುವಷ್ಟರಲ್ಲಿ ಆಚೆ ರಸ್ತೆಯಲ್ಲಿ ನಿಂತು ಕೆಂಪಿರೆಡ್ಡಿಯ ಜತೆ ಏನನ್ನೋ ಮಾತನಾಡುತ್ತಿದ್ದ ನಾಗರಾಜ, 'ಥೂ ದರಿದ್ರದೋಳು... ನೀಚಮುಂಡೇದು. ಕಮ್ಮಿ ಕುಲದೋರ ಮನೇಕೆ ಉಣ್ಣಂಡು ಬತ್ತಾವ್ಳೆ. ಎಂಗಾದ್ರು ಅರಗುತ್ತೆ? ಅದ್ಕೆ ಅನುಭವಿಸ್ತಾವ್ಳೆ' ಎಂದು ಗೊಣಗತೊಡಗಿದ. ಶಾರದಮ್ಮಳಿಗೆ ಕ್ಯಾಕರಿಸಿ ಮುಖಕ್ಕೆ ಉಗಿಯಬೇಕನಿಸಿತು.

ಇಂತಹ ಹೊತ್ತಿನಲ್ಲೂ ಚಿಕ್ಕಮ್ಮನಾದವಳಿಗೂ ಒಂದೊತ್ತು ಊಟ ಹಾಕಲಾಗದ ಅವನ ಅಮಾನವೀಯ ಮನಸ್ಥಿತಿಯ ಕುರಿತಾಗಿ ಅವಳಲ್ಲಿ ವ್ಯಗ್ರ ಭಾವ ಉಕ್ಕತೊಡಗಿತು. ಕಾರುಣ್ಯಕ್ಕೆ ಜಾತಿಯ ಬೇಲಿಗಳುಂಟೋ ಎಂಬ ವ್ಯಂಗ್ಯವೂ ಸುಳಿದು ಗಹಗಹಿಸಿ ನಗಬೇಕನಿಸಿತು. ಎಲ್ಲವನ್ನೂ ತಡೆದುಕೊಂಡು 'ಮತ್ತ ನೀ ಕರುದು ಇಕ್ಬೇಕಿತ್ತು' ಎಂದು ಕೆರಳಿದಳು. ನಾಗರಾಜ ಅಸಹನೆಯನ್ನು ತುಂಬಿಕೊಂಡೆ 'ನಿನ್ನಂತೋಳಿಗೆ ಉಣ್ಣಕ್ಕಿಕ್ಕಿದರೆ ನನ್ ಮನಿ ಲಕ್ಷ್ಮೀಕೆ ದರಿದ್ರ ಅಂಟಿಕೊಳ್ಳುತ್ತೆ. ಆ ಪಾಪಮು ನೀಸ್ಕೊಬೇಕಂದ್ರೆ ಮತ್ತೇನಾರ ವೋಮ ಗೀಮ ಮಾಡ್ಬೇಕು. ಅವೆಲ್ಲಾ ಬೇಕಾ ನಂಕೆ' ಎಂದು ವದರುತ್ತಾ ಕೆಂಪಿರೆಡ್ಡಿಯ ಕಡೆಗೆ ತಿರುಗಿ, 'ನೀಯೇನೂ ಎದರ್ಕೋಬೇಡ ಕೆಂಪ್ರೆಡ್ಡಿ. ಇವಳ್ನ ನಾ ಕಂಟ್ರೋಲ್ ಮಾಡ್ತೀನಿ. ನಮ್ಮೂರ್ಕೆ ಪ್ರೆಸಿಡೆಂಟ್ ಬರೋದು ಅಂದ್ರೆ ತಮಾಷೇನೆ' ಎಂದು ನುಡಿದ. ಮತ್ತೆ ಅವರು ಅಲ್ಲೇ ಮಾತನಾಡುತ್ತ ನಿಂತಿದ್ದರು. ಆಚೆ ಮಳೆ ನಿಂತಿದ್ದರೂ ಶಾರದಮ್ಮಳ ಮನೆಯ ಒಳಗೆ ನಿಂತಿರಲಿಲ್ಲ. ಕುದಿಯುತ್ತಲೇ ಬಾಗಿಲು ತೆಗೆದು ಮಳೆಗೆ ತನ್ನನ್ನು ತೆರೆದುಕೊಂಡಳು. ಅವಳ ಆ ಕುದಿಗೆ ತೊಟ್ಟಿಕ್ಕುವ ಹನಿಗಳು ಸೀಮೆಣ್ಣೆಯಂತಾಗಿ ಅವಳು ಜ್ವಲಿಸತೊಡಗಿದಳು.

ಮಾರನೆಯ ದಿನದ ಹೊತ್ತಿಗೆ ಬಿಸಿಲು ಬಯಲುಸೀಮೆಯ ಸೊಗಡನ್ನು ಹೊದ್ದು ನರ್ತಿಸಲು ಶುರುಮಾಡಿತ್ತು. ಒಂದೆರಡು ದಿನಗಳಲ್ಲಿ ಶಾರದಮ್ಮಳ ಮನೆಯು ಒಂದು ಹದಕ್ಕೆ ಬರತೊಡಗಿತು. ಆದರೂ ಗೋಡೆಗಳ ನೆಮ್ಮು ಇನ್ನೂ ಸಂಪೂರ್ಣ ಇಳಿದಿರಲಿಲ್ಲ. ಒಂದು ವಾರ ಬಿಸಿಲು ಕಾಯಬೇಕು ಎಂದುಕೊಂಡಳು. ಮಳೆ ಹಿಂದಕ್ಕೆ ಸರಿಯುತ್ತಿದ್ದಂತೆ ಆ ಊರಿನಲ್ಲಿ ರಾಷ್ಟ್ರಪತಿಗಳನ್ನು ಬರಮಾಡಿಕೊಳ್ಳುವ ತಯಾರಿಗಳು ಗರಿಗೆದರತೊಡಗಿದವು. ಅದೇ ವಾರದಲ್ಲಿ ಜಿಲ್ಲಾಧಿಕಾರಿ ಬಂದು ಏನೇನು ಕೆಲಸಗಳನ್ನು ಮಾಡಬೇಕೆಂದು ಪಟ್ಟಿ ಮಾಡಿ ಕೆಂಪಿರೆಡ್ಡಿ, ಸ್ಕೂಲಿನ ಮೇಷ್ಟ್ರುಗಳು ಮತ್ತು ಊರಿನ ಒಂದಷ್ಟು ಮುಖಂಡರುಗಳಿಗೆ ತಿಳಿಸಿ ಹೊರಟಿದ್ದರು. ಅದರಂತೆ ಊರಿನೊಳಗಿಂದ ಹಾದುಹೋಗುವ ಶಾಲೆಯ ರಸ್ತೆಗೆ ಸಂಪೂರ್ಣ ಟಾರು ಹಾಕಿಸುವುದು ಮತ್ತು ಆ ರಸ್ತೆಗೆ ಹೊಂದಿಕೊಂಡಂತೆ ಇರುವ ಒಂದೆರಡು ಹಳೆಯ ಮನೆಗಳಿಗೆ ಸುಣ್ಣ ಬಣ್ಣ ಬಳಿದು ಕಂಗೊಳಿಸುವಂತೆ ಮಾಡುವುದೂ ಆಗಿತ್ತು. ಅದರಲ್ಲಿ ಅಸ್ತವ್ಯಸ್ತವಾಗಿ ನಿಂತಿದ್ದ ಶಾರದಮ್ಮಳ ಮನೆಯೇ ದೊಡ್ಡ ಸವಾಲಾಗಿ ಕಾಣತೊಡಗಿತು. ಒಂದು ದಿನ ಅವರೆಲ್ಲರೂ ಶಾರದಮ್ಮಳ ಮನೆಯ ಬಾಗಿಲಿಗೆ ಬಂದು ಅವಳನ್ನು ಕರೆದದ್ದೂ ಆಯಿತು. ಈ ಮನೆಯನ್ನು ಹೇಗೆ ಸರಿಮಾಡುವುದು ಎಂಬ ಯೋಚನೆಯಲ್ಲಿ ಕುಳಿತಿದ್ದ ಅವಳು ತನ್ನ ಮನೆಯ ಮುಂದೆ ನಿಂತಿರುವ ಗುಂಪಿನ ಸದ್ದಿಗೆ ಗಾಬರಿಯಾಗಿ ಆಚೆ ಬಂದಳು. ಅವಳು ಬರುತ್ತಿದ್ದಂತೆ ಕೆಂಪಿರೆಡ್ಡಿ ಮತ್ತು ಶ್ರೀರಾಮರೆಡ್ಡಿ ಅಕ್ಕಪಕ್ಕ ನಿಂತಿದ್ದ ಅಪರೂಪದ ದೃಶ್ಯವನ್ನು ಕಂಡು ವಿಚಿತ್ರವಾದ ತಲ್ಲಣಗಳಿಗೆ ತೆರೆದುಕೊಂಡಳು. ಶ್ರೀರಾಮರೆಡ್ಡಿಯೆ ಮಾತು ಶುರುಮಾಡಿದ. 'ನೋಡು ಶಾರದಕ್ಕ, ರಾಷ್ಟ್ರಪತಿಗಳೋರು ಬರೋ ಇಂತಾ ಟೇಮುಕ ನಾವು ಆ ಪಾರ್ಟಿ ಈ ಪಾರ್ಟಿ ಅಂತ ಇರಕ್ಕಾಯ್ತದ. ಊರ್ಗೆ ಕೆಟ್ಟೆಸರು ಬರ್ಬಾರ್ದು ಅಷ್ಟೆ. ಅಲ್ವೆ ಕೆಂಪಿರೆಡ್ಡಿ?' ಎನ್ನುತ್ತಾ ಕೆಂಪಿರೆಡ್ಡಿಯ ಕಡೆಗೆ ನೋಡಿದ. ನಂತರ 'ಏನಿಲ್ಲ ಶಾರದಕ್ಕ. ರಾಷ್ಟ್ರಪತಿಗಳೋರು ಸ್ಕೂಲಿನ ಕಡೆಕೆ ವೋಗ್ಬೇಕಂದ್ರೆ ಇಂಗಾಸೆ ವೋಗ್ಬೇಕು. ಅದಕೆ ಈ ರೋಡುಕೆಲ್ಲ ತಾರಾಕಿಸ್ತಾರೆ. ಆದ್ರೆ ಈ ರೋಡುಕೆ ನಿನ ಮನಿ ಅವಲಕ್ಷಣ ತರಾ ಕಾಣ್ತದೆ ನೋಡು. ಅದುಕೆ ನಿನ ಮನಿ ಗೋಡೆಗಳುಕೆ ಕಿತ್ತೋಗಿರೊ ಕಡೇಕೆ ಮಣ್ಣು ಮೆತ್ತಿಸಿ ಸುಣ್ಣ–ಬಣ್ಣ ಬಳಿಯೋದು ಅಂತ